ಶಿವಮೊಗ್ಗ – ಮಂಗಳೂರು ವಿದ್ಯುತ್ ವಾಹಕ ಟವರ್‌ಗಳ ರಿಪೇರಿ

2127: ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗಕ್ಕೆ ಅಂದರೆ, ಉಡುಪಿ, ಕುಂದಾಪುರ, ಕಾರ್ಕಳ ತಾಲ್ಲೂಕುಗಳಿಗೆ ವಿದ್ಯುತ್‌ನ್ನು 1958ನೇ ಇಸವಿಯಲ್ಲಿ ಹಾಕಿರುವ 110 ಕೆವಿ ಶಿವಮೊಗ್ಗ – ಮಂಗಳೂರು ವಾಹಕಗಳಲ್ಲಿ ಸರಬರಾಜು ಮಾಡಲಾಗುತ್ತಿರುವುದು ನಿಜವೇ;

ಆ) ಈ ವಿದ್ಯುತ್ ಲೈನು ಆಮೇಲೆ ಯಾವುದೇ ದುರಸ್ತಿ ಉಸ್ತುವಾರಿ ಇಲ್ಲದೇ ನಡುರಸ್ತೆಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ವಿದ್ಯುತ್ ವಾಹಕಗಳ ಟವರ್‌ಗಳು ತುಕ್ಕು ಹಿಡಿದಿರುವುದರಿಂದ ಟವರ್ ಕುಸಿದು ಬಿದ್ದು ವಿದ್ಯುತ್ ಸರಬರಾಜು ನಿಲುಗಡೆ ಆಗುವ ಭೀತಿ ಇರುವುದು ನಿಜವೆ;

ಈ) ಇದನ್ನು ಸರಿಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು.

ಆ) ಈ ವಿದ್ಯುತ್ ಲೈನನ್ನು ಆಗತ್ಯ ಬಂದಾಗಲೆಲ್ಲಾ ದುರಸ್ತಿ ಮಾಡಲಾಗುತ್ತದೆ ಮತ್ತು ಸರಿಯಾದ ಉಸ್ತುವಾರಿಯಿಂದ ನಿರ್ವಹಣೆ ಕೆಲಸಗಳನ್ನು ಮಾಡಲಾಗುತ್ತಿದೆ.

ಇ) ನಿರ್ವಹಣೆ ಕೆಲಸಗಳನ್ನು ಮಾಡಲಾಗುತ್ತಿರುವುದರಿಂದ ಟವರ್ ಕುಸಿದು ಬಿದ್ದು ವಿದ್ಯುತ್ ಸರಬರಾಜು ನಿಲುಗಡೆ ಆಗುವ ಭೀತಿ ಇರುವುದಿಲ್ಲ.

ಈ) ತುಕ್ಕು ಹಿಡಿದಿದ್ದ ಎರಡು ಟವರ್‌ಗಳನ್ನು ಈಗಾಗಲೇ ಬದಲಾಯಿಸಲಾಗಿದೆ. ಕೆಲವು ಟವರ್‌ಗಳಲ್ಲಿ ತುಕ್ಕು ಹಿಡಿದಿರುವ ಮೇಲ್ಭಾಗದ ಕ್ರಾಸ್ ಆರ್ಮ್‌ಗಳನ್ನು ತ್ವರಿತ ಗತಿಯಲ್ಲಿ ಬದಲಾಯಿಸುವ ಕ್ರಮ ಕೈಗೊಳ್ಳಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಕೋಡಂಗಲ್ ರಸ್ತೆ ಹಾಗೂ ಸೇಡಂ ಹಂದರಿಕೆ ರಸ್ತೆ ದುರಸ್ತಿ

2199: ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1992–93ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ಲೋಕೋಪಯೋಗಿ ರಸ್ತೆಗಳಾದ ಗುಲ್ಬರ್ಗಾ ಕೋಡಂಗಲ್ ರಸ್ತೆ ಸೇಡಂ ಸರಹದ್ದಿನಿಂದ ಗಡಿ ಪ್ರಾಂತ್ಯದ ರೆಬ್ಬನ್ ಪಲ್ಲಿಯವರೆಗೆ ಹಾಗೂ ಸೇಡಂ ಹಂದರಿಕೆ ರಸ್ತೆಗಳ (ಕೋಡ್ಲಾ ಮಾರ್ಗವಾಗಿ) ದುರಸ್ತಿಗಾಗಿ ಮಾಡಿರುವ ವೆಚ್ಚವೆಷ್ಟು;

ಆ) ಇವುಗಳ ದುರಸ್ತಿ ಮಾಡಿದ್ದರೆ ಈಗಲೂ ಸಹ ದೊಡ್ಡ ದೊಡ್ಡ ತಗ್ಗುಗಳು ಬಿದ್ದು ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿಲ್ಲವೆ.

ಇ) ಗುಲ್ಬರ್ಗಾ ವಿಭಾಗದಲ್ಲಿಯ ಇಂತಹ ಹದಗಟ್ಟಿರುವ ರಸ್ತೆಗಳು ಬೇರೆಯಲ್ಲಿಯೂ ಇಲ್ಲವಲ್ಲವೇ;

ಈ) ಈ ರಸ್ತೆಗಳನ್ನು ದುರಸ್ತಿ ಮಾಡಿ ಸಂಚಾರಕ್ಕೆ ಅನುಕೂಲ ಮಾಡಿಕೊಡುವದು ಯಾವಾಗ ?